# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು

**ಸಿ.ಸಿ. ನಂ.1293-2021 ಡಿ .ಡಬ್ಲ್ಯು: 1**

| | |
|---|---|
| ಸಾಕ್ಷಿದಾರರ ಹೆಸರು<br>ತಂದೆ/ ಗಂಡನ ಹೆಸರು<br>ವಯಸ್ಸು<br>ಉದ್ಯೋಗ<br>ವಾಸ್ತವ್ಯ | ಶೋಭ<br>ನಾರಾಯಣ .ಜಿ<br>38 ವರ್ಷ<br>ಶಿಕ್ಷಕಿ<br>ಕೀಲಾರ, ಮಂಡ್ಯ ತಾಲ್ಲೂಕು. |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 31-08-2024.** |

## ಮುಖ್ಯ ವಿಚಾರಣೆ: ಶ್ರೀ ಎಂ.ಬಿ ವಕೀಲರಿಂದ:

ನಾನು ಕೆ.ವಿ.ಶಂಕರೇಗೌಡ ಶಾಲೆಯಲ್ಲಿ ಮುಖ್ಯ ಶಿಕ್ಷಕಿಯಾಗಿ ಸುಮಾರು 13 ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ. ನನಗೆ ಇಬ್ಬರು ಮಕ್ಕಳು ಇರುತ್ತಾರೆ. ನಾನು ಮದುವೆಯಾದಾಗಿನಿಂದಲೂ ನನ್ನ ಗಂಡ ವರದಕ್ಷಿಣೆ ಕಿರುಕುಳವನ್ನು ನೀಡುತ್ತಿದ್ದು, ನಾನು ಶಾಲಾ ಶಿಕ್ಷಕಿಯಾಗಿದ್ದರಿಂದ ಈ ವಿಚಾರವನ್ನು ಬೇರಯವರಿಗೆ ತಿಳಿಸಿದರೆ ಮರ್ಯಾದೆ ಹೋಗುತ್ತದೆ ಎಂದು ನಾನು ಯಾರಿಗೂ ತಿಳಿಸಿರುವುದಿಲ್ಲ. ನನ್ನ ಗಂಡ ನನ್ನನ್ನು ಹಣ ಕೇಳಿದಾಗ ನಾನು ಕೊಡದೇ ಇದ್ದರೆ ನಿನಗೊಂದು ಗತಿ ಕಾಣಿಸುತ್ತೇನೆ ಎಂದು ಹೆದರಿಸುತ್ತಿದ್ದರು. ನನ್ನ ಗಂಡ ದುಶ್ಚಟಗಳಿಗೆ ಬಳಿಯಾಗಿದ್ದರು. ನನ್ನ ಗಂಡ ನನ್ನ ಸಹಿಯನ್ನು ಪೋರ್ಜರಿ ಮಾಡುವುದನ್ನು ಸಹ ಕಲಿತಿದ್ದರು. ನನ್ನ ಗಂಡನ ನನಗೆ ಸೇರಿದ ಚೆಕ್ಕುಗಳನ್ನು ಮನೆಯಿಂದ ಕಳ್ಳತನ ಮಾಡಿಕೊಂಡು ಮನೆ ಬಿಟ್ಟು ಹೋಗಿರುತ್ತಾರೆ.

2. ನನಗೆ ಪಿರ್ಯಾದಿದಾರರು ಯಾರು ಎಂದು ಗೊತ್ತಿರುವುದಿಲ್ಲ. ನಾನು ಶಿಕ್ಷಕಿಯಾಗಿರುವುದರಿಂದ ನನಗೆ ಬರುವ ಸಂಬಳ ನನ್ನ ಜೀವನಕ್ಕೆ

ಸಾಕಾಗುವುದರಿಂದ ನನಗೆ ಬೇರಯವರಿಂದ ಸಾಲ ಮಾಡುವ ದರ್ದು ಇರುವುದಿಲ್ಲ. ನನ್ನ ಗಂಡ ನನ್ನ ಚೆಕ್ಕುಗಳನ್ನು ಕಳುವು ಮಾಡಿಕೊಂಡು ನನ್ನ ಸಹಿಯನ್ನು ಪೋರ್ಜರಿ ಮಾಡಿ ನನ್ನ ವಿರುದ್ಧ ಬೇರಯವರ ಮುಖೇನ ಸುಮಾರು 10 ಪ್ರಕರಣಗಳನ್ನು ದಾಖಲು ಮಾಡಿಸಿರುತ್ತಾರೆ. ಈ ಪ್ರಕರಣದಲ್ಲಿ ಹಾಜರುಪಡಿಸಿರುವ ಚೆಕ್ಕಿನಲ್ಲಿ ಸಹಿ ಮತ್ತು ಒಕ್ಕಣೆ ನನ್ನದಲ್ಲ. ನನ್ನ ಗಂಡ ನನ್ನ ಚೆಕ್ಕುಗಳನ್ನು ಪೋರ್ಜರಿ ಮಾಡಿರುವ ಸಂಬಂಧ ಮಂಡ್ಯ ಎಸ್.ಪಿ ಮತ್ತು ಬ್ಯಾಂಕಿನವರಿಗೆ ದೂರು ನೀಡಿರುತ್ತೇನೆ. ನಾನು ಪಿರ್ಯಾದಿದಾರರಿಂದ ಯಾವುದೇ ಸಾಲವನ್ನು ಪಡೆಯದೇ ಇರುವುದರಿಂದ ನನ್ನ ವಿರುದ್ಧ ದಾಖಲಾಗಿರುವ ಪ್ರಕರಣವನ್ನು ವಜಾ ಕರಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

(ಮುಂದುವರಿದ ಮುಖ್ಯ ವಿಚಾರಣೆಗೆ ವಕೀಲರು ಸಮಯಾವಕಾಶವನ್ನು ಕೇಳಿರುವುದರಿಂದ ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**